# ಪೂರ್ವ ಮಾಧ್ಯಮಿಕ ಶಿಷ್ಯವೃತ್ತಿ ಪರೀಕ್ಷೆ (8 ನೇ ಇಯತ್ತೆ), ಜುಲೈ 2022

**ಆಸನ ಕ್ರಮಾಂಕ-** | | | | | | | | | | | |

**ಸಂಚ- A**

**0 8 1 1**

**ಪೇಪರ್ ಕ್ರ - I**

**ಸಮಯ : 11:00 ರಿಂದ 12:30**

## ಮಾಧ್ಯಮ - ಕನ್ನಡ

**ಒಟ್ಟು ಗುಣಗಳು : 150**

## ಪ್ರಥಮ ಭಾಷೆ ಮತ್ತು ಗಣಿತ

**ಪುಟಗಳು : 32**

**ಪ್ರಶ್ನೆ ಪತ್ರಿಕೆ ಬಿಡಿಸುವುದಕ್ಕಿಂತ ಮುಂಚೆ ಕೆಳಗಿನ ಸೂಚನೆಗಳು ಎಚ್ಚರಿಕೆಯಿಂದ ಓದಿರಿ.**

(1) ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ವಿಭಾಗಗಳಿವೆ. ವಿಭಾಗ **I** ರಲ್ಲಿ ಪ್ರಥಮ ಭಾಷೆಯ **1** ರಿಂದ **25** ಪ್ರಶ್ನೆಗಳಿವೆ ಮತ್ತು ವಿಭಾಗ **II** ರಲ್ಲಿ ಗಣಿತದ **26** ರಿಂದ **75** ಪ್ರಶ್ನೆಗಳಿವೆ. ಹೀಗೆ **75** ಪ್ರಶ್ನೆಗಳು ಇದ್ದು ಎಲ್ಲ ಪ್ರಶ್ನೆಗಳು ಬಿಡಿಸುವುದು ಅವಶ್ಯಕವಾಗಿದೆ.

(2) ಪ್ರತಿಯೊಂದು ಪ್ರಶ್ನೆಗೆ **2** ಗುಣಗಳಿವೆ.

(3) ಪ್ರಶ್ನೆ ಪತ್ರಿಕೆ ಬಿಡಿಸಲು ಒಟ್ಟು **90** ನಿಮಿಷಗಳ ಕಾಲಾವಧಿ ಕೊಡಲಾಗಿದೆ.

(4) ಉತ್ತರಗಳನ್ನು ನೊಂದಾಯಿಸುವ ಸಲುವಾಗಿ ಸ್ವತಂತ್ರ ಉತ್ತರ ಪತ್ರಿಕೆ ಕೊಡಲಾಗಿದೆ. ಪ್ರತಿಯೊಂದು ಪ್ರಶ್ನೆ ಕ್ರಮಾಂಕದ ಮುಂದೆ ನಾಲ್ಕು ಪರ್ಯಾಯವಿರುವ ವರ್ತುಳಗಳನ್ನು ಕೊಡಲಾಗಿದೆ. ಅದರಲ್ಲಿ ಯೋಗ್ಯ ಉತ್ತರವಿರುವ ಪರ್ಯಾಯ ಕ್ರಮಾಂಕವಿರುವ ವರ್ತುಳವನ್ನು ಉದಾಹರಣೆಯಲ್ಲಿ ತೋರಿಸಿದಂತೆ ನೊಂದಾಯಿಸಿರಿ. ಉದಾ – ಪ್ರಶ್ನೆ ಕ್ರಮಾಂಕ 6ರ ಉತ್ತರ 2 ಆದರೆ ಕೆಳಗೆ ತೋರಿಸಿದಂತೆ ವೃತ್ತವನ್ನು ಪೂರ್ಣವಾಗಿ ತುಂಬಿರಿ.

ಉದಾ. ಪ್ರಶ್ನೆ ಕ್ರ. **6 -** ① ● ③ ④

(5) ಕೆಳಗಿನಂತೆ ನೊಂದಾಯಿಸಿದ ಉತ್ತರಗಳ ಬಗ್ಗೆ ವಿಚಾರ ಮಾಡಲಾಗುವದಿಲ್ಲ.

✓① –②– ⊙ ✗④

(6) ಗರಿಷ್ಠ 20% ಪ್ರಶ್ನೆಗಳು ಎರಡು ಸರಿಯಾದ ಪರ್ಯಾಯಗಳನ್ನು ಹೊಂದಿವೆ. ಆ ಎರಡು ಪರ್ಯಾಯಗಳು ನೊಂದಾಯಿಸುವುದು ಅವಶ್ಯಕವಾಗಿದೆ, ಅದರ ಸಲುವಾಗಿ ಆ ಪ್ರಶ್ನೆಯ ಜೊತೆಗೆ ಯೋಗ್ಯವಾದ ಎರಡು ಪರ್ಯಾಯಗಳು ಆಯ್ಕೆ ಮಾಡಿರಿ ಎಂಬ ಸೂಚನೆ ಕೊಡಲಾಗಿದೆ.

(7) ಯೋಗ್ಯವಾದ ಎರಡು ಪರ್ಯಾಯಗಳು ಆಯ್ಕೆ ಮಾಡಿರಿ ಹೀಗೆ ಸೂಚನೆ ಕೊಟ್ಟ ಪ್ರಶ್ನೆಯ ಹೊರತಾಗಿ ಉಳಿದ ಪ್ರಶ್ನೆಗಳಿಗೆ ಒಂದಕ್ಕಿಂತ ಹೆಚ್ಚು ವರ್ತುಳಗಳಲ್ಲಿ ನೊಂದಾಯಿಸಿದ ಉತ್ತರಗಳು, ತಿದ್ದುಪಡಿ ಮಾಡಿ ನೊಂದಾಯಿಸಿದ ಉತ್ತರಗಳು ಗಮನಕ್ಕೆ ತೆಗೆದುಕೊಳ್ಳಲಾಗುವದಿಲ್ಲ.

(8) ಒಮ್ಮೆ ನೊಂದಾಯಿಸಿದ ಉತ್ತರ ಬದಲಾಯಿಸಲು ಬರುವುದಿಲ್ಲ.

(9) ಪರ್ಯಾಯದ ಉತ್ತರ ಕ್ರಮಾಂಕಗಳನ್ನು ಕಪ್ಪು ಅಥವಾ ನೀಲಿ ಬಾಲ್ ಪೆನ್ನಿನಿಂದ ನೊಂದಾಯಿಸಬೇಕು. ಪೆನ್ಸಿಲಿನಿಂದ ನೊಂದಾಯಿಸಿದ ಉತ್ತರಗಳ ಬಗ್ಗೆ ವಿಚಾರ ಮಾಡಲಾಗುವುದಿಲ್ಲ.

(10) ಪ್ರಶ್ನೆ ಪತ್ರಿಕೆಯ ಪ್ರತಿಯೊಂದು ಪುಟದ ಕೆಳಗೆ ಮತ್ತು ಕೊನೆಯ ಪುಟದ ಮೇಲೆ ಕಚ್ಚಾ ಕೆಲಸಕ್ಕಾಗಿ ಖಾಲಿ ಸ್ಥಳವನ್ನು ಬಿಡಲಾಗಿದೆ ಅಲ್ಲಿಯೇ ಕಚ್ಚಾ ಕಾರ್ಯ ಮಾಡಬೇಕು.

(11) ಪರೀಕ್ಷೆಗೆ ಮರ್ಯಾದಿತ ವೇಳೆ ಇರುವುದರಿಂದ ಒಂದು ಪ್ರಶ್ನೆಯ ಉತ್ತರ ನಿಮಗೆ ಬರದಿದ್ದರೆ, ಮುಂದಿನ ಪ್ರಶ್ನೆ ಬಿಡಿಸಿರಿ. ಕೊನೆಗೆ ವೇಳೆ ಇದ್ದರೆ ಉಳಿದಂತ ಪ್ರಶ್ನೆಗಳ ಬಗ್ಗೆ ಪುನಃ ಪ್ರಯತ್ನ ಮಾಡಿರಿ.

(12) ಯಾವುದೇ ಪ್ರಶ್ನೆಯಲ್ಲಿ ತಪ್ಪು / ದೋಷಗಳಿದ್ದರೆ ಅದರ ಬಗ್ಗೆ ಪರ್ಯವೇಕ್ಷಕ ಅಥವಾ ಪರೀಕ್ಷೆ ಕೇಂದ್ರ ಸಂಚಾಲಕರ ಕಡೆ ವಿಚಾರಣೆ ಮಾಡಬಾರದು.

(13) ಪ್ರಶ್ನೆಯಲ್ಲಿಯ ಯಾವುದೇ ದೋಷ/ತಪ್ಪು/ ಆಕ್ಷೇಪಣೆ ಬಗ್ಗೆ ನಿಮ್ಮ ಲಿಖಿತ ನಿವೇದನೆಯನ್ನು ಶಾಲೆಯವರು ಅಥವಾ ಪಾಲಕರು ಗಟಶಿಕ್ಷಣಾಧಿಕಾರಿ ಅಥವಾ ಶಿಕ್ಷಣಾಧಿಕಾರಿಯವರಿಗೆ ಲಿಖಿತ ಸ್ವರೂಪದಲ್ಲಿ ಕಳುಹಿಸದೇ ಸಂಬಂಧಿತ ಶಾಲೆಯ ಲೌಗಿನ್‌ದಿಂದ ಆನ್‌ಲೈನ್ ನೋಂದಾಯಿಸಬೇಕು.

(14) MSCE ವೆಬ್‌ಸೈಟ್‌ನಲ್ಲಿ (ಮಧ್ಯಂತರ) ಕೊನೆಯ ಉತ್ತರ ಸೂಚಿ ಪ್ರಕಟಿಸಿದ **10** ದಿನಗಳಲ್ಲಿ ದೋಷ/ತಪ್ಪು/ಆಕ್ಷೇಪಣೆ/ಸಮಸ್ಯೆಗಳನ್ನು ಆನ್‌ಲೈನ್‌ನಲ್ಲಿ ನೊಂದಾಯಿಸಬೇಕು.

(15) ಮುದ್ರಣ ದೋಷ ಅಥವಾ ಅನ್ಯ ಕಾರಣಗಳಿಂದ ಪ್ರಶ್ನೆ ತಪ್ಪು ಎಂದು ಕಂಡು ಬಂದರೇ ತಜ್ಞ ಸಮಿತಿಯ ಅಭಿಪ್ರಾಯಕ್ಕೆ ಅನುಸಾರವಾಗಿ ಅದನ್ನು ರದ್ದುಮಾಡಲಾಗುವುದು.

(16) ಮೂಲ ಕನ್ನಡ ಮಾಧ್ಯಮದ ಜೊತೆಗೆ ಇಂಗ್ಲೀಷ್ ಭಾಷೆಯಲ್ಲಿ ಪ್ರಶ್ನೆ ಪತ್ರಿಕೆ ಕೊಡಲಾಗಿದೆ, ಮೂಲ ಕನ್ನಡ ಮಾಧ್ಯಮದಲ್ಲಿಯ ಸಂದಿಗ್ಧ ಪ್ರಶ್ನೆಯ ಬಗ್ಗೆ ಇಂಗ್ಲೀಷ್ ಪ್ರಶ್ನೆ ನೋಡಿರಿ.

## ವಿಭಾಗ - I

## ಕನ್ನಡ

**ಪ್ರಶ್ನೆ 01 ರಿಂದ 03 ಸೂಚನೆ :**

ಕೆಳಗಿನ ಗದ್ಯಭಾಗವನ್ನು ಓದಿರಿ ಮತ್ತು ಅದರ ಮೇಲೆ ಆಧರಿಸಿದ ಪ್ರಶ್ನೆಗಳ ಉತ್ತರಗಳನ್ನು ಪರ್ಯಾಯದಿಂದ ಆಯ್ಕೆ ಮಾಡಿರಿ.

ಹಂಪೆ ಎಂಬ ಶಬ್ದ ಕಿವಿಗೆ ಬಿದ್ದಾಕ್ಷಣ ಕನ್ನಡಿಗನ ಮೈ ನವೀರೆಳುತ್ತದೆ. ಹಂಪೆಯ ಇತಿಹಾಸ ಮನವನ್ನು ಕದಡುತ್ತದೆ. ಇದು ಒಂದು ಕಾಲದಲ್ಲಿ ವಿಜಯನಗರ ಸಾಮ್ರಾಜ್ಯದ ರಾಜಧಾನಿಯಾಗಿತ್ತು ವಿಜಯನಗರದ ಅರಸರು ತಮ್ಮ ಧೈರ್ಯ ಮತ್ತು ಸಾಹಸಗಳಿಂದ ರಾಜ್ಯವನ್ನು ವಿಸ್ತರಿಸಿ, ಎಲ್ಲ ಪ್ರಜೆಗಳ ಸುಖ ಸಮೃದ್ಧಿ ಶಾಂತಿಯ ಆಡಳಿತವನ್ನು ನೀಡಿದರು. ಹಂಪೆಯ ರಾಜ ಬೀದಿಗಳಲ್ಲಿ ಮುತ್ತು ರತ್ನಗಳು ರಾಶಿ ಹಾಕಿ ಮಾರಲ್ಪಡುತ್ತಿದ್ದವು. ಅಂದಿನ ಆ ವೈಭವದ ಕಾಲ ಗತಿಸಿ ಹೋದರೂ ಸಹಿತ ಹಂಪೆ ಮಾತ್ರ ಗತ ಇತಿಹಾಸದ ಕುರುಹುಗಳನ್ನು ತನ್ನೊಡಿಲಿನಲ್ಲಿಟ್ಟುಕೊಂಡು ಐತಿಹಾಸಿಕ ಮತ್ತು ಪ್ರೇಕ್ಷಣೀಯ ಸ್ಥಳವಾಗಿ ಇಂದಿಗೂ ಗರ್ವದಿಂದ ತಲೆ ಎತ್ತಿ ನಿಂತಿದೆ.

**01.** ಹಂಪೆಯ ಇತಿಹಾಸ ಏನನ್ನು ಕದಡುತ್ತದೆ?

(1) ಮೈ (2) ಮನ

(3) ವಿಜಯನಗರ (4) ಧೈರ್ಯ–ಸಾಹಸ

**02.** .............. ಇದು ................ ಸಾಮ್ರಾಜ್ಯದ ರಾಜಧಾನಿಯಾಗಿತ್ತು.

(1) ವಿಜಯನಗರ, ಹಂಪೆ (2) ಹಂಪೆ, ಕರ್ನಾಟಕ

(3) ಹಂಪೆ, ವಿಜಯನಗರ (4) ಹಂಪೆ, ಕನ್ನಡ

**03.** 'ಉದರ' ಇದರ ಸಮಾನಾರ್ಥಕ ಶಬ್ದ ಯಾವುದು ಪರಿಚ್ಛೇದದಲ್ಲಿ ಬಂದಿದೆ?

(1) ಧೈರ್ಯ (2) ಸಾಮ್ರಾಜ್ಯ

(3) ರಾಜ (4) ಒಡಲು

**SPACE FOR ROUGH WORK**

**ಪ್ರಶ್ನೆ 04 ರಿಂದ 06 ಸೂಚನೆ :**

ಕೆಳಗಿನ ಕವಿತೆಯನ್ನು ಓದಿರಿ. ಅದರ ಕೆಳಗೆ ಕೇಳಲಾಗಿರುವ ಪ್ರಶ್ನೆಗಳ ಉತ್ತರಗಳನ್ನು ಪರ್ಯಾಯಗಳಿಂದ ಆಯ್ಕೆ ಮಾಡಿರಿ.

ಒಬ್ಬ ಹುಡುಗಿ, ಚಿಕ್ಕಳು
ಕಂಕುಳಲ್ಲಿ ಹುಷಾರಾಗಿ ಅಕ್ಕರೆಂದ
ಒಂದು ಮಗುವನ್ನು ಎತ್ತಿಕೊಂಡು
ಹುಡುಗಾಟಿಕೆಗೆ ಬರಿಗಾಲಲ್ಲಿ, ಲಂಗದ ನಿರಿ ಚಿಮ್ಮುತ್ತ
ಏದುಸಿರು ಬಿಡುತ್ತ
ಗುಡ್ಡ ಹತ್ತಿ ಬರುತ್ತಿದ್ದಾಳೆ, ಬಿಸಿಲು
ನೋಡಕ್ಕೆ ಲಕ್ಷಣವಾಗಿದಾಳೆ
ಬರಿಕತ್ತಿನ ಮೇಲೆ ಬಿದ್ದಿರೊ ಜಡೇಲಿ ಹೂ ಮುಡುದಿದಾಳೆ
ಮರದ ನೆರಳಲ್ಲಿ ಕೂತು ನೋಡುತ್ತಿದ್ದ
ಗಾಂಧಿಗೆ ಕನಿಕರ ಉಕ್ಕಿ ಕೆಳಗಿಳಿದು ಹೋಗಿ
ಕೇಳುತ್ತಾರೆ:
''ಭಾರವೇನಮ್ಮ?''
ಹುಡುಗಿ ನಡಿತಾನ
ಒಂದು ಕಂಕುಳಿಂದ ಇನ್ನೊಂದಕ್ಕೆ ಅಕ್ಕರೆಂದ,
ಹುಷಾರಾಗಿ, ಗೆಲುವಾಗಿ, ಮಗೂನ್ನ ಬದಲಾಯಿಸಿ
ಹೇಳುತ್ತಾಳೆ:
''ಇವನು ನನ್ನ ತಮ್ಮ''

**04.** 'ಪ್ರೀತಿ' ಈ ಶಬ್ದದ ಸಮಾನಾರ್ಥಕ ಶಬ್ದ ಯಾವುದು ಕವಿತೆಯಲ್ಲಿ ಬಂದಿದೆ?

(1) ಕನಿಕರ
(2) ಅಕ್ಕರೆ
(3) ಲಕ್ಷಣ
(4) ಪ್ರೇಮ

**SPACE FOR ROUGH WORK**

05. ಕವಿತೆಯ ಪ್ರಕಾರ ತಪ್ಪಾಗಿರುವ ವಿಧಾನ ಯಾವುದು?

(1) ಹುಡುಗಿ ಬರಿಗಾಲದಿಂದ ಇದ್ದಳು

(2) ಹುಡುಗಿ ಜಡೆಯಲ್ಲಿ ಹೂ ಮುಡಿದಿದ್ದಳು

(3) ಹುಡುಗಿ ಸೀರೆ ಉಟ್ಟಿರುವಳು

(4) ಹುಡುಗಿ ಕಂಕುಳಲ್ಲಿ ಮಗುವನ್ನು ಎತ್ತಿಕೊಂಡಿರುವಳು

06. ಕವಿತೆಯಲ್ಲಿ ಯಾರಿಗೆ ಕನಿಕರ ಬಂತು?

(1) ಗಾಂಧಿಗೆ (2) ಹುಡುಗಿಗೆ

(3) ಮಗುವಿಗೆ (4) ಯಾರಿಗೂ ಇಲ್ಲ

07. ಹಳೆಗನ್ನಡ ಶಬ್ದದ ಸಂಧಿ ಬಿಡಿಸಿದ ಯೋಗ್ಯ ಪರ್ಯಾಯ ಯಾವುದು?

(1) ಹಳೆಯ + ಕನ್ನಡ (2) ಹಳೆ + ಗನ್ನಡ

(3) ಹಳೆ + ಕನ್ನಡ (4) ಹಳೆಯ + ಗನ್ನಡ

08. ಕೆಳಗಿನ ವಿಧಾನಗಳನ್ನು ಓದಿರಿ. ಉತ್ತರದ ಯೋಗ್ಯ ಪರ್ಯಾಯ ಕ್ರಮಾಂಕವನ್ನು ಆಯ್ಕೆ ಮಾಡಿರಿ.

(ಅ) ಭೀಮನು ಬಕಾಸುರನನ್ನು ಕೊಂದನು.

(ಬ) ರಾವಣನು ರಾಮನಿಂದ ಕೊಲ್ಲಲ್ಪಟ್ಟನು.

(1) 'ಅ' ಕರ್ಮಣಿ ಪ್ರಯೋಗ 'ಬ' ಕರ್ತರಿ ಪ್ರಯೋಗ

(2) 'ಅ' ಮತ್ತು 'ಬ' ಎರಡು ಕರ್ತರಿ ಪ್ರಯೋಗ

(3) 'ಅ' ಕರ್ತರಿ ಪ್ರಯೋಗ 'ಬ' ಕರ್ಮಣಿ ಪ್ರಯೋಗ

(4) 'ಅ' ಮತ್ತು 'ಬ' ಎರಡು ಕರ್ಮಣಿ ಪ್ರಯೋಗ

09. ಕೆಳಗಿನವುಗಳಲ್ಲಿ ಗುಂಪಿಗೆ ಸರಿ ಹೊಂದದ ಪರ್ಯಾಯವನ್ನು ಆಯ್ಕೆ ಮಾಡಿರಿ. (ದೇಶಿ- ಅನ್ಯದೇಶಿ ಶಬ್ದಗಳು)

(1) ರಾತ್ರಿ (2) ಊಟ

(3) ಮಾವ (4) ಓಡು

**SPACE FOR ROUGH WORK**

10. ‘ಅರಸ’ ಇದನ್ನು ಬಹುವಚನ ಮಾಡಲು ಯಾವ ಪ್ರತ್ಯಯ ಜೋಡಿಸಬೇಕಾಗುತ್ತದೆ?

(1) ಅಂದಿರು (2) ಅರು

(3) ಗಳು (4) ಯಾವುದೂ ಅಲ್ಲ

11. ‘ರಾಮ’ ಈ ನಾಮಪದಕ್ಕೆ ದ್ವಿತಿಯಾ ಪ್ರತ್ಯಯವನ್ನು ಸೇರಿಸಿದಾಗ ತಯಾರಾಗುವ ಶಬ್ದ ........

(1) ರಾಮನನ್ನು (2) ರಾಮನಿಗೆ

(3) ರಾಮನು (4) ರಾಮನಿಂದ

12. ಕೆಳಗಿನ ಯಾವ ಶಬ್ದದ ಲಿಂಗ ಬದಲಿಸಲು ‘ಇತ್ತಿ’ ಪ್ರತ್ಯಯ ಜೋಡಿಸಬೇಕಾಗುವದು?
(ಯೋಗ್ಯವಿರುವ ಎರಡು ಪರ್ಯಾಯಗಳನ್ನು ಆಯ್ಕೆ ಮಾಡಿರಿ)

(1) ಹೂವಾಡಿಗ (2) ಒಕ್ಕಲಿಗ

(3) ಅಗಸ (4) ಕುಂಬಾರ

13. ಆಹಾ ಚಂದ್ರನ ಬೆಳದಿಂಗಳು ಎಷ್ಟೊಂದು ಆಹ್ಲಾದಕರವಾಗಿದೆ. ಈ ವಾಕ್ಯದಲ್ಲಿ ಯಾವ ವಿರಾಮ ಚಿಹ್ನೆ ಅವಶ್ಯಕವಾಗಿದೆ?

(1) ಅಲ್ಪವಿರಾಮ (2) ಉದ್ಗಾರವಾಚಕ

(3) ಪ್ರಶ್ನಾರ್ಥಕ (4) ಪೂರ್ಣವಿರಾಮ

14. ಕೆಳಗಿನವುಗಳಲ್ಲಿ ಯಾವುದು ಭೂತಕಾಲದ ಉದಾಹರಣೆಯಾಗಿದೆ?

(1) ಕುಸ್ತಿಗಳು ಜಾತ್ರೆಯ ಕಾಲದಲ್ಲಿ ವಿಶೇಷವಾಗಿ ನಡೆಯುತ್ತಿದ್ದವು.

(2) ಜಾತ್ರೆಯಲ್ಲಿ ವಿಶೇಷವಾದ ಕುಸ್ತಿಗಳು ನಡೆಯುತ್ತವೆ.

(3) ವಿಶೇಷವಾದ ಕುಸ್ತಿಗಳು ಜಾತ್ರೆಯ ಕಾಲದಲ್ಲಿ ನಡೆಯಲಿವೆ.

(4) ವಿಶೇಷವಾದ ಕುಸ್ತಿಗಳು ಜಾತ್ರೆಯಲ್ಲಿ ನಡೆಯುತ್ತಿವೆ.

**SPACE FOR ROUGH WORK**

15. ಕನ್ನಡ ವರ್ಣಮಾಲೆಯಲ್ಲಿ .............

(ಯೋಗ್ಯವಿರುವ ಎರಡು ಪರ್ಯಾಯಗಳನ್ನು ಆಯ್ಕೆ ಮಾಡಿರಿ.)

(1) ಸ್ವರಗಳ ಸಂಖ್ಯೆಗಿಂತ ವ್ಯಂಜನಗಳ ಸಂಖ್ಯೆ ಹೆಚ್ಚು ಇದೆ.

(2) ವ್ಯಂಜನಗಳ ಸಂಖ್ಯೆಗಿಂತ ಸ್ವರಗಳ ಸಂಖ್ಯೆ ಹೆಚ್ಚು ಇದೆ.

(3) ಹ್ರಸ್ವಸ್ವರ ಮತ್ತು ದೀರ್ಘ ಸ್ವರಗಳ ಸಂಖ್ಯೆ ಸಮನಾಗಿದೆ.

(4) ಅಲ್ಪಪ್ರಾಣ ಮತ್ತು ಮಹಾಪ್ರಾಣಗಳ ಸಂಖ್ಯೆ ಸಮನಾಗಿದೆ.

16. ಕೆಳಗಿನವುಗಳಲ್ಲಿ ಯಾವುದು ಅಂಶಿ ಸಮಾಸದ ಉದಾಹರಣೆಯಾಗಿದೆ?

(1) ಮೂಗಿನ + ತುದಿ = ತುದಿಮೂಗು

(2) ಕಣ್ಣನ್ನು + ತೆರೆ = ಕಣ್ದೆರೆ

(3) ಮೂರು + ಮಡಿ = ಮುಮ್ಮಡಿ

(4) ಸಪ್ತ + ಋಷಿ = ಸಪ್ತರ್ಷಿ

17. ಕವಿತೆಗಳ ಯಾವ ಪ್ರಕಾರಕ್ಕೆ ಸಾಲುಗಳ ಬಂಧನವಿಲ್ಲ?

(1) ತ್ರಿಪದಿ
(2) ಕಂದಪದ್ಯ
(3) ಷಟ್ಪದಿ
(4) ರಗಳೆ

18. ಕೆಳಗಿನವುಗಳಲ್ಲಿ ಶುದ್ಧ ಶಬ್ದ ಪರ್ಯಾಯದಿಂದ ಆಯ್ಕೆ ಮಾಡಿರಿ.

(1) ಸುರ್ಯೋದಯ
(2) ಸೂರ್ಯೋದಯ
(3) ಸೂರ್ಯೋೕದಯ
(4) ಸುರ್ಯೋೕದಯ

19. ಕೆಳಗಿನ ಪರ್ಯಾಯಗಳಲ್ಲಿ ಯೋಗ್ಯವಿರುವ ಎರಡು ವಿಧಾನಗಳನ್ನು ಆಯ್ಕೆ ಮಾಡಿರಿ.

(1) ಜ್ಞಾನಪೀಠ ಪುರಸ್ಕಾರದ ವಿತರಣೆಯು 1944 ರಿಂದ ಆರಂಭವಾಯಿತು.

(2) ಒಮ್ಮೆ ಜ್ಞಾನಪೀಠ ಪಾರಿತೋಷಕವನ್ನು ಸ್ವೀಕರಿಸಿದ ಗ್ರಂಥಕರ್ತನಿಗೆ ಮತ್ತೊಮ್ಮೆ ಅದು ದೊರಕುವದಿಲ್ಲ.

(3) ಅಂತಿಮ ಆಯ್ಕೆಯಲ್ಲಿ ಒಂದಕ್ಕಿಂತ ಹೆಚ್ಚು ಕೃತಿಗಳು ಪಾರಿತೋಷಕಕ್ಕೆ ಅರ್ಹವೆಂದು ನಿರ್ಧರಿಸಲ್ಪಟ್ಟರೆ ಅಂಥ ಸಂದರ್ಭದಲ್ಲಿ ಸಲಹಾ ಸಮಿತಿಯ ನಿರ್ಣಯವೇ ಅಂತಿಮ ನಿರ್ಣಯವಾಗಿರುತ್ತದೆ.

(4) ಯಾವುದೇ ಭಾಷೆಯ ಗ್ರಂಥಕ್ಕೆ ಒಮ್ಮೆ ಪಾರಿತೋಷಕ ದೊರೆತ ಮೇಲೆ ಮುಂದಿನ ಎರಡು ವರ್ಷಗಳ ಕಾಲ ಆ ಭಾಷೆಯ ಗ್ರಂಥಕ್ಕೆ ಪಾರಿತೋಷಕ ಕೊಡುವದಿಲ್ಲ.

**SPACE FOR ROUGH WORK**

20. ಕೆಳಗಿನವುಗಳಲ್ಲಿ ತಪ್ಪಾಗಿರುವ ವಿರುದ್ಧಾರ್ಥಕ ಶಬ್ದಗಳ ಜೋಡಿ ಕಂಡು ಹಿಡಿಯಿರಿ.

(1) ಆಸಕ್ತಿ X ಅನಾಸಕ್ತಿ
(2) ಅನುಕೂಲ X ಪ್ರತಿಕೂಲ
(3) ಸಂತೋಷ X ದುಃಖ
(4) ಇರುಳು X ರಾತ್ರಿ

21. ಬಿಟ್ಟ ಸ್ಥಳಗಳನ್ನು ಕ್ರಮವಾಗಿ ಯೋಗ್ಯ ಪರ್ಯಾಯದಿಂದ ತುಂಬಿರಿ.

ಊಟ ಬಲ್ಲವನಿಗೆ ................. ಮಾತು ಬಲ್ಲವನಿಗೆ .......................

(1) ಜಗಳವಿಲ್ಲ, ರೋಗವಿಲ್ಲ
(2) ರೋಗವಿಲ್ಲ, ಜಗಳವಿಲ್ಲ
(3) ಜಗಳವಿಲ್ಲ, ಜಗಳವಿಲ್ಲ
(4) ರೋಗವಿಲ್ಲ, ರೋಗವಿಲ್ಲ.

22. ಪಡೆನುಡಿಗಳನ್ನು ಅಭ್ಯಸಿಸಿ ಯೋಗ್ಯ ಪರ್ಯಾಯ ಆಯ್ಕೆ ಮಾಡಿರಿ.

(ಅ) ಕಣ್ಣು ತೆರೆ = ಎಚ್ಚರವಾಗು

(ಅ) ಕಣ್ಣು ಮುಚ್ಚು = ಮಲಗಿಕೊಳ್ಳು

(1) 'ಅ' ಸರಿಯಾಗಿದೆ 'ಬ' ತಪ್ಪಾಗಿದೆ.
(2) 'ಬ' ಸರಿಯಾಗಿದೆ 'ಅ' ತಪ್ಪಾಗಿದೆ.
(3) 'ಅ' ಮತ್ತು 'ಬ' ಎರಡೂ ಸರಿಯಾಗಿವೆ.
(4) 'ಅ' ಮತ್ತು 'ಬ' ಎರಡೂ ತಪ್ಪಾಗಿವೆ.

23. ಕೆಳಗಿನವುಗಳಲ್ಲಿ ಯಾವುದು ರೂಪಕಾಲಂಕಾರದ ಉದಾಹರಣೆಯಾಗಿದೆ?

(1) ಮಗುವಿನ ಮುಖವು ಚಂದ್ರನ ಮುಖದಂತೆ ಮನೋಹರವಾಗಿದೆ.
(2) ನೀಚರಿಗೆ ಮಾಡಿದ ಉಪಕಾರ ಹಾವಿಗೆ ಹಾಲೆರೆದಂತೆ
(3) ಶ್ರಾವಣದ ತಿಂಗಳಲ್ಲಿ ನಿಸರ್ಗವನ್ನು ನೋಡಲು ಮೋಡಗಳು ಮುತ್ತು ಹನಿಗಳ ಚಿಮುಕಿಸುತ್ತ ಬಂದವು.
(4) ವಿದ್ವಾಂಸನಾದ ಆತನು ಸಾಕ್ಷಾತ್ ಸರಸ್ವತಿ.

24. ಕೆಳಗಿನವುಗಳಲ್ಲಿ ಯಾವುದು ತತ್ಸಮ (ಸಂಸ್ಕೃತ) ಶಬ್ದವಿದೆ?

(1) ಮೊಗ
(2) ಸಗ್ಗ
(3) ವಸಂತ
(4) ಸಕ್ಕರೆ

25. ನಾವು ಕಾಲಕ್ಕೆ ಸರಿಯಾಗಿ ರೈಲು ನಿಲ್ದಾಣ ತಲುಪಬೇಕು. ಇದು ವಾಕ್ಯದ ಯಾವ ಪ್ರಕಾರವಿದೆ?

(1) ಸರಳ ವಾಕ್ಯ
(2) ಮಿಶ್ರ ವಾಕ್ಯ
(3) ಸಂಯುಕ್ತ ವಾಕ್ಯ
(4) ಯಾವುದೂ ಅಲ್ಲ.

**SPACE FOR ROUGH WORK**

## SECTION - II

## MATHEMATICS

**26.** The ratio of supplementary angle and complementary angle of a given angle is 8:3. Then what will be the ratio of given angle with its supplementary angle?

(1) 4:1 (2) 1:3

(3) 1:4 (4) 1:2

**27.** What is the cost of fencing a circular garden of radius 28 m with five rounds of wire, if the wire costs Rs. 50 per m?

(1) Rs. 45,000 (2) Rs. 46,000

(3) Rs. 44,000 (4) Rs. 50,000

**28.** $\left(\frac{-2x^2}{3y}\right)^3$ = ? (Choose two correct options)

(1) $\frac{-8x^6}{27y^3}$ (2) $\frac{-2x^6}{3y^3}$

(3) $\frac{-8x^6}{-27y^3}$ (4) $\frac{-8x^6y^{-3}}{27}$

**29.** The average of 10 numbers is 20. Out of which the average of first 6 numbers is 15. The average of last 3 numbers is 16 then what will be the seventh number?

(1) 72 (2) 62

(3) 52 (4) 60

**SPACE FOR ROUGH WORK**

## ವಿಭಾಗ - II

### ಗಣಿತ

**26.** ಒಂದು ಕೋನದ ಪೂರಕಕೋನ ಮತ್ತು ಪರಿಪೂರಕ ಕೋನ ಇವುಗಳ ಅಳತೆಗಳ ಗುಣೋತ್ತರ 8:3ಇದೆ. ಹಾಗಾದರೆ ಆ ಕೋನದ ಅದರ ಪೂರಕಕೋನದೊಂದಿಗೆ ಇರುವ ಗುಣೋತ್ತರವೆಷ್ಟು?

(1) 4:1
(2) 1:3
(3) 1:4
(4) 1:2

**27.** ಒಂದು ವರ್ತುಳಾಕಾರ ಹೂದೋಟದ ತ್ರಿಜ್ಯ 28ಮೀಟರ ಇದೆ. ಆ ಹೊದೋಟದ ಸುತ್ತಲೂ 5 ಪದರಿನ ಸಂರಕ್ಷಕ ತಂತಿಯ ಬೇಲಿ ಹಾಕುವದಿದೆ. ತಂತಿಯ ಬೆಲೆ 50 ರೂ ಪ್ರತಿ ಮೀಟರ ಇದ್ದರೆ ಒಟ್ಟು ಬೇಲಿ ಹಾಕಲು ಎಷ್ಟು ಖರ್ಚು ಬರುವದು?

(1) 45,000 ರೂ.
(2) 46,000 ರೂ.
(3) 44,000 ರೂ.
(4) 50,000 ರೂ.

**28.** $\left(\frac{-2x^2}{3y}\right)^3$ = ಎಷ್ಟು ? (ಎರಡು ಯೋಗ್ಯ ಪರ್ಯಾಯಗಳನ್ನು ಆಯ್ಕೆ ಮಾಡಿರಿ.)

(1) $\frac{-8x^6}{27y^3}$
(2) $\frac{-2x^6}{3y^3}$
(3) $\frac{-8x^6}{-27y^3}$
(4) $\frac{-8x^6y^{-3}}{27}$

**29.** 10 ಸಂಖ್ಯೆಗಳ ಸರಾಸರಿ 20 ಇದೆ. ಅವುಗಳಲ್ಲಿಯ ಮೊದಲನೆಯ 6 ಸಂಖ್ಯೆಗಳ ಸರಾಸರಿ 15 ಇದೆ. ಕೊನೆಯ 3 ಸಂಖ್ಯೆಗಳ ಸರಾಸರಿ 16 ಇದೆ. ಹಾಗಾದರೆ ಏಳನೆಯ ಕ್ರಮಾಂಕದ ಸಂಖ್ಯೆ ಯಾವುದು?

(1) 72
(2) 62
(3) 52
(4) 60

**SPACE FOR ROUGH WORK**

**30.** What is the sum of additive inverse of $(5a - 3b)$ and additive inverse of $(-6a + 2b)$

(1) $a + b$ (2) $a - b$

(3) $-a + b$ (4) $-a - b$

**31.** Which of the following statement is wrong?

(A) If a number is divisible by 2 and 5 then it is also divisible by 10.

(B) The numbers divisible by 6 are also divisible by 2 and 3.

(C) The numbers divisible by 7 are odd.

(D) 1, 2, 3, 6 are common factors of all the numbers divisible by 6.

(1) A (2) B

(3) C (4) D

**32.** Which of the following statement is not true? (Choose two correct options)

(A) The opposite angles of a parallelogram are congruent.

(B) The adjacent sides of a parallelogram are congruent.

(C) The diagonals of a parallelogram are congruent.

(D) The diagonals of a parallelogram bisect each other.

(1) statement A (2) statement B

(3) statement C (4) statement D

**33.** The length of a cuboidal tank is one and half time its breadth and height is twice the length. If volume of the tank is 4500 cubic metre then what is the height of tank? (Choose two correct options)

(1) 10 m. (2) 3000 cm

(3) 30 m. (4) 1000 cm

**SPACE FOR ROUGH WORK**

**30.** $(5a - 3b)$ ದ ಬೇರೀಜುವ್ಯಸ್ತ ಸಂಖ್ಯೆ ಮತ್ತು $(-6a + 2b)$ ದ ಬೇರೀಜುವ್ಯಸ್ತ ಸಂಖ್ಯೆ ಇವುಗಳ ಬೇರೀಜು ಎಷ್ಟು ?

(1) $a + b$ (2) $a - b$

(3) $-a + b$ (4) $-a - b$

**31.** ಕೆಳಗಿನವುಗಳಲ್ಲಿ ಅಯೋಗ್ಯ ವಿಧಾನ ಯಾವುದು?

(ಅ) ಯಾವುದೊಂದು ಸಂಖ್ಯೆಗೆ 2 ಮತ್ತು 5 ರಿಂದ ನಿಶೇಷವಾಗಿ ಭಾಗ ಹೋಗುತ್ತಿದ್ದರೆ 10 ರಿಂದ ನಿಶೇಷವಾಗಿ ಭಾಗ ಹೋಗುತ್ತದೆ.

(ಬ) 6 ರಿಂದ ನಿಶೇಷವಾಗಿ ಭಾಗ ಹೋಗುವ ಸಂಖ್ಯೆಗೆ 2 ಮತ್ತು 3 ರಿಂದ ನಿಶೇಷವಾಗಿ ಭಾಗ ಹೋಗುತ್ತದೆ.

(ಕ) 7 ರಿಂದ ಭಾಗ ಹೋಗುವ ಎಲ್ಲ ಸಂಖ್ಯೆಗಳು ವಿಷಮ ಸಂಖ್ಯೆಗಳಾಗಿರುತ್ತವೆ.

(ಡ) 6 ರಿಂದ ನಿಶೇಷ ಭಾಗ ಹೋಗುವ ಸಂಖ್ಯೆಗಳಿಗೆ 1,2,3,6 ಇವು ಸಾಮಾನ್ಯ ವಿಭಾಜಕಗಳಿರುತ್ತವೆ.

(1) ಅ (2) ಬ

(3) ಕ (4) ಡ

**32.** ಕೆಳಗಿನವುಗಳಲ್ಲಿ ಅಸತ್ಯ ವಿಧಾನಗಳು ಯಾವವು? (ಎರಡು ಯೋಗ್ಯ ಪರ್ಯಾಯಗಳನ್ನು ಆಯ್ಕೆ ಮಾಡಿರಿ.)

(ಅ) ಸಮಾಂತರ ಭುಜ ಚೌಕೋನದ ಸಂಮುಖ ಕೋನಗಳು ಏಕರೂಪ ಇರುತ್ತವೆ.

(ಬ) ಸಮಾಂತರ ಭುಜ ಚೌಕೋನದ ಹೊಂದಿದ ಭುಜಗಳು ಏಕರೂಪ ಇರುತ್ತವೆ.

(ಕ) ಸಮಾಂತರ ಭುಜ ಚೌಕೋನದ ಕರ್ಣಗಳು ಏಕರೂಪ ಇರುತ್ತವೆ.

(ಡ) ಸಮಾಂತರ ಭುಜ ಚೌಕೋನದ ಕರ್ಣಗಳು ಪರಸ್ಪರ ದ್ವಿಭಾಗಿಸುತ್ತವೆ.

(1) ವಿಧಾನ 'ಅ' (2) ವಿಧಾನ 'ಬ'

(3) ವಿಧಾನ 'ಕ' (4) ವಿಧಾನ 'ಡ'

**33.** ಒಂದು ಇಷ್ಟಿಕಾಚಿತಿ ಆಕಾರದ ನೀರಿನ ಹೌದಿನ ಉದ್ದಳತೆಯು ಅಗಲದ ಒಂದುವರೆ ಪಟ್ಟು ಇದೆ. ಎತ್ತರವು ಉದ್ದಳತೆಯ ಎರಡು ಪಟ್ಟು ಇದೆ. ಹೌದಿನ ಒಟ್ಟು ಘನಫಲ 4500ಘ.ಮೀ ಇದ್ದರೆ ಹೌದಿನ ಎತ್ತರವೆಷ್ಟು? (ಎರಡು ಯೋಗ್ಯ ಪರ್ಯಾಯಗಳನ್ನು ಆಯ್ಕೆ ಮಾಡಿರಿ)

(1) 10 ಮೀ. (2) 3000 ಸೆಂ.ಮೀ


(3) 30 ಮೀ. (4) 1000 ಸೆಂ.ಮೀ

**SPACE FOR ROUGH WORK**

**34.** If the diameter of a wheel of a tractor is 1.4 m. then how much distance is covered by the wheel in 400 complete rotation.

(1) 1.66 km (2) 1.56 km
(3) 1.76 km (4) 1.86 km

**35.** In the adjoining fig. line $l$ || line $m$ || line $n$ and line $x$ and line $y$ are their transversals. If AB = 18 cm, BC = 30 cm, QR = 21 cm then PR = ?




(1) 8.4 cm (2) 14.7 cm
(3) 12.6 cm (4) 33.6 cm

**36.** If a number is divided by 18 then the remainder is 1, if it is divided by 24 then the remainder is 7 and if it is divided by 36 then the remainder is 19. What is the smallest such type of number?

(1) 91 (2) 71
(3) 79 (4) 55

**37.** Which polynomial should be substracted from the polynomial $7x^2 - 2x + 4$ to get the polynomial $10x^2 + 5$?


(1) $3x^2 + 2x + 1$ (2) $-3x^2 - 2x - 1$
(3) $3x^2 - 2x + 1$ (4) $-3x^2 + 2x - 1$

**SPACE FOR ROUGH WORK**

**34.** ಒಂದು ಟ್ರಾಕ್ಟರದ ಚಕ್ರದ ವ್ಯಾಸವು 1.4 ಮೀ ಇದೆ. ಆ ಚಕ್ರವು 400 ಸುತ್ತು ಪೂರ್ಣ ಮಾಡಿದರೆ ಟ್ರಾಕ್ಟರ ಎಷ್ಟು ಅಂತರ ಚಲಿಸುತ್ತದೆ?

(1) 1.66 ಕಿ.ಮೀ (2) 1.56 ಕಿ.ಮೀ
(3) 1.76 ಕಿ.ಮೀ (4) 1.86 ಕಿ.ಮೀ

**35.** ಬದಿಯ ಆಕೃತಿಯಲ್ಲಿ ರೇಷೆ $l \parallel$ ರೇಷೆ $m \parallel$ ರೇಷೆ $n$ ಮತ್ತು ರೇಷೆ $x$ ಮತ್ತು ರೇಷೆ $y$ ಇವು ಛೇದಿಕೆಗಳಿವೆ. ಒಂದು ವೇಳೆ AB = 18 ಸೆಂ.ಮೀ, BC = 30 ಸೆಂ.ಮೀ, QR = 21 ಸೆಂ.ಮೀ ಇದ್ದರೆ PR = ?




(1) 8.4 ಸೆಂ.ಮೀ (2) 14.7 ಸೆಂ.ಮೀ
(3) 12.6 ಸೆಂ.ಮೀ (4) 33.6 ಸೆಂ.ಮೀ

**36.** ಒಂದು ಸಂಖ್ಯೆಗೆ 18 ರಿಂದ ಭಾಗಿಸಿದಾಗ ಶೇಷ 1 ಉಳಿಯುತ್ತದೆ. 24 ರಿಂದ ಭಾಗಿಸಿದಾಗ ಶೇಷ 7 ಉಳಿಯುತ್ತದೆ ಮತ್ತು 36 ರಿಂದ ಭಾಗಿಸಿದಾಗ ಶೇಷ 19 ಉಳಿಯುತ್ತದೆ ಹಾಗಾದರೆ ಇಂತಹ ಚಿಕ್ಕ ಸಂಖ್ಯೆ ಯಾವುದು?

(1) 91 (2) 71
(3) 79 (4) 55

**37.** $7x^2 - 2x + 4$ ಈ ಬಹುಪದಿಯಿಂದ ಯಾವ ಬಹುಪದಿ ವಜಾಬಾಕಿ ಮಾಡಲಾಗಿ $10x^2 + 5$ ಈ ಬಹುಪದಿ ದೊರೆಯುವದು?

(1) $3x^2 + 2x + 1$ (2) $-3x^2 - 2x - 1$
(3) $3x^2 - 2x + 1$ (4) $-3x^2 + 2x - 1$

**SPACE FOR ROUGH WORK**

**38.** $\dfrac{\sqrt{1.96} - \sqrt{2.25} + \sqrt{2.89}}{\sqrt{0.000256}} = ?$

(1) $10^2$ (2) $10^3$

(3) $10^{-2}$ (4) $10^{-3}$

**39.** Pradnya has exactly same number of Rs. 2 coins and Rs. 5 coins. She has a total amount of Rs. 196 then how many coins of Rs. 5 she has?

(1) 28 (2) 56

(3) 35 (4) 14

**40.** Two angles of measure 40º and 140º with different vertex are drawn then which of the following statement is true?

(1) The given angles are supplementary angles.

(2) The given angles are linear pair of angles.

(3) The given angles are vertically opposite angles.

(4) The given angles are adjacent angles.

**41.** The co-ordinate of point P on a number line is $\frac{-3}{7}$. The distance between point P and point Q is 2 units then what will be the co-ordinate of point Q? (Choose two correct options)

(1) $\frac{-17}{7}$ (2) $\frac{11}{7}$

(3) $\frac{-1}{7}$ (4) $\frac{-5}{7}$

**SPACE FOR ROUGH WORK**

**38.** $\dfrac{\sqrt{1.96}-\sqrt{2.25}+\sqrt{2.89}}{\sqrt{0.000256}}$ = ಎಷ್ಟು ?

(1) $10^2$ (2) $10^3$

(3) $10^{-2}$ (4) $10^{-3}$

**39.** ಪ್ರಜ್ಞಾಳ ಹತ್ತಿರ ಎಷ್ಟು 2 ರೂಪಾಯಿಯ ನಾಣ್ಯಗಳಿವೆಯೋ ಅಷ್ಟೇ 5 ರೂಪಾಯಿಯ ನಾಣ್ಯಗಳಿವೆ. ಅವಳ ಹತ್ತಿರ ಒಟ್ಟು 196 ರೂಪಾಯಿಗಳಿವೆ. ಹಾಗಾದರೆ ಅವಳ ಹತ್ತಿರ ಇರುವ 5 ರೂಪಾಯಿಯ ನಾಣ್ಯಗಳ ಸಂಖ್ಯೆ ಎಷ್ಟು?

(1) 28 (2) 56

(3) 35 (4) 14

**40.** 40º ಮತ್ತು 140º ಅಳತೆಯ ಒಂದೇ ಶಿರೋಬಿಂದು ಇಲ್ಲದ ಎರಡು ಕೋನ ರಚಿಸಲಾಯಿತು. ಇದರ ಮೇಲಿಂದ ಯೋಗ್ಯ ವಿಧಾನ ಆಯ್ಕೆ ಮಾಡಿರಿ.

(1) ಆ ಕೋನಗಳು ಪೂರಕ ಕೋನಗಳಿವೆ.

(2) ಆ ಕೋನಗಳು ಏಕರೇಷಿಯ ಜೋಡಿಕೋನಗಳಿವೆ.

(3) ಆ ಕೋನಗಳು ವಿರುದ್ಧಕೋನಗಳಾಗಿವೆ.

(4) ಆ ಕೋನಗಳು ಸಂಲಗ್ನ ಕೋನಗಳಾಗಿವೆ.

**41.** ಸಂಖ್ಯಾ ರೇಷೆಯ ಮೇಲೆ 'P' ಬಿಂದುವಿನ ನಿರ್ದೇಶಾಂಕ $\frac{-3}{7}$ ಇದ್ದು, P ಮತ್ತು Q ಈ ಬಿಂದುಗಳಲ್ಲಿಯ ಅಂತರ 2 ಏಕಕ ಇದ್ದರೆ Q ಬಿಂದುವಿನ ನಿರ್ದೇಶಕ ಎಷ್ಟು ? (ಎರಡು ಯೋಗ್ಯ ಪರ್ಯಾಯಗಳನ್ನು ಆಯ್ಕೆ ಮಾಡಿರಿ.)

(1) $\frac{-17}{7}$ (2) $\frac{11}{7}$

(3) $\frac{-1}{7}$ (4) $\frac{-5}{7}$

**SPACE FOR ROUGH WORK**

**42.** The radius of a circle with centre 'O' is 10 cm. The length of a chord is 16 cm. Find the distance of the chord from the centre of the circle.

(1) 6 cm (2) 5 cm

(3) 8 cm (4) 26 cm

**43.** A hall has length 30 meter and breadth 9.5 m. For flooring this hall, the square tiles are to be used of half meter side then how many tiles should be required?

(1) 1240 (2) 1140

(3) 1340 (4) 1150

**44.** Ajay scored 25% marks less than Balbir. Then Balbir scored how much percentage of marks more than Ajay?

(1) 10 (2) $11\frac{1}{9}$

(3) 25 (4) $33\frac{1}{3}$

**45.** The sides forming right angle of a right angled triangle are 8 cm and 15 cm then what is radius of circumcircle of that triangle?

(1) 8.5 cm (2) 9.5 cm

(3) 13 cm (4) 17 cm

**46.** If the side of an equilateral triangle is 18 cm then what is its area?

(1) 81 sq.cm. (2) $80\sqrt{3}$ sq.cm.

(3) $82\sqrt{3}$ sq.cm. (4) $81\sqrt{3}$ sq.cm.

**SPACE FOR ROUGH WORK**

42. 'O' ಕೇಂದ್ರಬಿಂದುವಿರುವ ವರ್ತುಳದ ತ್ರಿಜ್ಯ 10 ಸೆಂ.ಮೀ. ಇದೆ. ಆ ವರ್ತುಳದಲ್ಲಿಯ 16 ಸೆಂ.ಮೀ ಉದ್ದಳತೆಯಿರುವ 'ಜ್ಯಾ' ವು ಕೇಂದ್ರದಿಂದ ಎಷ್ಟು ಅಂತರದ ಮೇಲಿರುತ್ತದೆ?

(1) 6 ಸೆಂ.ಮೀ
(2) 5 ಸೆಂ.ಮೀ
(3) 8 ಸೆಂ.ಮೀ
(4) 26 ಸೆಂ.ಮೀ

43. ಒಂದು ಸಭಾಗೃಹದ ಉದ್ದ 30 ಮೀಟರ ಮತ್ತು ಅಗಲ 9.5 ಮೀಟರ ಇದೆ. ಆ ಪೂರ್ಣ ಸಭಾಗೃಹಕ್ಕೆ ಅರ್ಧ ಮೀಟರ ಭುಜವಿರುವ ಚೌರಸಾಕೃತಿ ಹಾಸುಗಲ್ಲು ಹಾಕಬೇಕಾಗಿದೆ. ಹಾಗಾದರೆ ಸಭಾಗೃಹಕ್ಕೆ ಒಟ್ಟು ಎಷ್ಟು ಹಾಸುಗಲ್ಲುಗಳು ಬೇಕಾಗುವವು?

(1) 1240
(2) 1140
(3) 1340
(4) 1150

44. ಅಜಯನಿಗೆ ಬಲಬೀರನಿಗಿಂತ 25% ಗುಣ ಕಡಿಮೆ ದೊರೆತವು. ಹಾಗಾದರೆ ಬಲಬೀರನಿಗೆ ಅಜಯನಿಗಿಂತ ಎಷ್ಟು ಪ್ರತಿಶತ ಹೆಚ್ಚು ಗುಣ ದೊರೆತವು?

(1) 10
(2) $11\frac{1}{9}$
(3) 25
(4) $33\frac{1}{3}$

45. ಒಂದು ಕಾಟಕೋನ ತ್ರಿಕೋನದ ಕಾಟಕೋನವನ್ನು ಉಂಟು ಮಾಡುವಭುಜಗಳು 8 ಸೆಂ.ಮೀ. ಮತ್ತು 15 ಸೆಂ.ಮೀ ಇವೆ ಹಾಗಾದರೆ ಆ ತ್ರಿಕೋನದ ಪರಿವರ್ತುಳದ ತ್ರಿಜ್ಯ ಎಷ್ಟು ?

(1) 8.5 ಸೆಂ.ಮೀ.
(2) 9.5 ಸೆಂ.ಮೀ.
(3) 13 ಸೆಂ.ಮೀ.
(4) 17 ಸೆಂ.ಮೀ.

46. ಸಮಭುಜ ತ್ರಿಕೋನದ ಒಂದು ಭುಜ 18 ಸೆಂ.ಮೀ. ಇದ್ದರೆ ಅದರ ಕ್ಷೇತ್ರಫಲವೆಷ್ಟು?

(1) 81 ಚೌ.ಸೆಂ.ಮೀ.
(2) $80\sqrt{3}$ ಚೌ.ಸೆಂ.ಮೀ.
(3) $82\sqrt{3}$ ಚೌ.ಸೆಂ.ಮೀ.
(4) $81\sqrt{3}$ ಚೌ.ಸೆಂ.ಮೀ.

**SPACE FOR ROUGH WORK**

**47.** The rate of tickets of a bus are increased by 20%. After six months, the rate of tickets again increased by 10% then what is the percentage increase in the original rate of tickets.

(1) 30% (2) 32%

(3) 25% (4) 35%

**48.** A merchant purchased 25 dozen oranges at the rate of Rs. 25 per dozen. He sold all oranges at the rate of Rs. 32 per dozen. Then how much percentage of profit did he get?

(1) 25 (2) 32

(3) 28 (4) 7

**49.** A rope of length 216 m. is cut at five places at same distance then what is the length of each piece in cm?

(1) 360 cm (2) 3600 cm

(3) 36 cm (4) 36000 cm

**50.** Which of the following term should be added so that the expression $49x^2+\frac{64}{y^2}$ will be a perfect square? (Choose two correct options)

(1) $\frac{112x}{y}$ (2) $\frac{-112x}{y}$

(3) $-36xy$ (4) $\frac{56x}{y}$

**51.** $\frac{6.28\times 3.14}{9.42}\div\frac{(3.14)^2}{12.56} = ?$

(1) $\frac{3}{8}$ (2) 0.6

(3) 1.3 (4) $\frac{8}{3}$

**SPACE FOR ROUGH WORK**

**47.** ಬಸ್ಸಿನ ಟಿಕೇಟ ದರದಲ್ಲಿ 20% ಹೆಚ್ಚಾಯಿತು. ಆರು ತಿಂಗಳ ನಂತರ ಮತ್ತೆ 10% ಹೆಚ್ಚಾಯಿತು. ಹಾಗಾದರೆ ಮೂಲ ಟಿಕೇಟ ದರದಲ್ಲಿ ಎಷ್ಟು ಹೆಚ್ಚಾಯಿತು?

(1) 30% (2) 32%

(3) 25% (4) 35%

**48.** ಒಬ್ಬ ವ್ಯಾಪಾರಿಯು 25 ರೂ. ಡಝನ್ ದರದಂತೆ 25 ಡಝನ್ ಬಾಳೆಹಣ್ಣುಗಳನ್ನು ಕೊಂಡನು. ಆ ಎಲ್ಲ ಬಾಳೆಹಣ್ಣುಗಳನ್ನು ಅವನು 32 ರೂ. ಡಝನ್ ದರದಿಂದ ಮಾರಿದರೆ ಅವನಿಗೆ ಎಷ್ಟು ಪ್ರತಿಶತ ಲಾಭವಾಗುವದು?

(1) 25 (2) 32 (3) 28 (4) 7

**49.** 216 ಮೀಟರ ಉದ್ದಳತೆಯ ಹಗ್ಗವನ್ನು ಸಮಾನ ಅಂತರದ ಮೇಲೆ 5 ಸ್ಥಳಗಳಲ್ಲಿ ಕತ್ತರಿಸಿದರೆ ಪ್ರತಿಯೊಂದು ತುಂಡಿನ ಉದ್ದಳತೆ ಎಷ್ಟು ಸೆಂ.ಮೀ. ಇರುವದು?

(1) 360 ಸೆಂ.ಮೀ. (2) 3600 ಸೆಂ.ಮೀ.

(3) 36 ಸೆಂ.ಮೀ. (4) 36000 ಸೆಂ.ಮೀ.

**50.** $49x^2 + \frac{64}{y^2}$ ಈ ರಾಶಿಯು ಪೂರ್ಣ ವರ್ಗ ಆಗುವ ಸಲುವಾಗಿ ಅದರಲ್ಲಿ ಯಾವ ಪದವನ್ನು ಕೂಡಿಸಬೇಕಾಗುವದು. (ಎರಡು ಯೋಗ್ಯ ಪರ್ಯಾಯಗಳನ್ನು ಆಯ್ಕೆ ಮಾಡಿರಿ)

(1) $\frac{112x}{y}$ (2) $\frac{-112x}{y}$

(3) $-36xy$ (4) $\frac{56x}{y}$

**51.** $\frac{6.28 \times 3.14}{9.42} \div \frac{(3.14)^2}{12.56}$ = ಎಷ್ಟು ?

(1) $\frac{3}{8}$ (2) 0.6

(3) 1.3 (4) $\frac{8}{3}$

**SPACE FOR ROUGH WORK**

52. The number of girls of $8^{th}$ standard A division in a school at Beed is 5 more than half the number of boys. If total number of students in that division is 65 then how many girls are there in that division?

(1) 20 (2) 30
(3) 25 (4) 40

53. Which of the following statement is correct?

(A) The number $+\frac{5}{13}$ is to the right side of the number $\frac{3}{11}$ on the number line.

(B) The number $\frac{7}{13}$ is to the left of zero.

(C) The numbers $-\frac{4}{13}$ and $\frac{2}{13}$ are to the left of zero on the number line.

(D) The number $-\frac{5}{13}$ is to right of the number $\frac{3}{13}$ on the number line.

(1) statement A (2) statement B
(3) statement C (4) statement D

54. $\frac{7.5 \times 7.5 - 7 \times 7.5 + 3.5 \times 3.5}{7.5 - 3.5} = ?$

(1) 3 (2) 4
(3) 5 (4) 2

**SPACE FOR ROUGH WORK**

**52.** ಬೀಡ ನಗರದ ಒಂದು ಶಾಲೆಯಲ್ಲಿಯ 8ನೇ ವರ್ಗದ A ವಿಭಾಗದ ಹುಡುಗಿಯರ ಸಂಖ್ಯೆ ಹುಡುಗರ ಸಂಖ್ಯೆಯ ಅರ್ಧಕ್ಕಿಂತ 5 ರಿಂದ ಹೆಚ್ಚಿಗೆ ಇದೆ. ಆ ವಿಭಾಗದ ಒಟ್ಟು ವಿದ್ಯಾರ್ಥಿಗಳ ಸಂಖ್ಯೆ 65 ಇದ್ದರೆ ಹುಡುಗಿಯರ ಸಂಖ್ಯೆ ಎಷ್ಟು?

(1) 20 (2) 30

(3) 25 (4) 40

**53.** ಕೆಳಗಿನವುಗಳಲ್ಲಿಯ ಯೋಗ್ಯ ಪರ್ಯಾಯ ಆಯ್ಕೆ ಮಾಡಿರಿ.

(ಅ) ಸಂಖ್ಯಾರೇಷೆಯ ಮೇಲೆ $+\frac{5}{13}$ ಈ ಸಂಖ್ಯೆಯು $\frac{3}{11}$ ಈ ಸಂಖ್ಯೆಯ ಬಲಬದಿಗೆ ಇರುತ್ತದೆ.

(ಬ) ಸಂಖ್ಯಾರೇಷೆಯ ಮೇಲೆ $\frac{7}{13}$ ಈ ಸಂಖ್ಯೆಯು ಶೂನ್ಯದ ಎಡಬದಿಗೆ ಇರುತ್ತದೆ.

(ಕ) ಸಂಖ್ಯಾರೇಷೆಯ ಮೇಲೆ $-\frac{4}{13}$ ಮತ್ತು $\frac{2}{13}$ ಈ ಸಂಖ್ಯೆಗಳು ಶೂನ್ಯದ ಎಡಬದಿಗೆ ಇರುತ್ತವೆ.

(ಡ) ಸಂಖ್ಯಾರೇಷೆಯ ಮೇಲೆ $-\frac{5}{13}$ ಈ ಸಂಖ್ಯೆ $\frac{3}{13}$ ದ ಬಲಬದಿಗೆ ಇರುತ್ತದೆ.

(1) ವಿಧಾನ 'ಅ' (2) ವಿಧಾನ 'ಬ'

(3) ವಿಧಾನ 'ಕ' (4) ವಿಧಾನ 'ಡ'

**54.** $\frac{7.5 \times 7.5 - 7 \times 7.5 + 3.5 \times 3.5}{7.5 - 3.5}$ = ಎಷ್ಟು ?

(1) 3 (2) 4

(3) 5 (4) 2

**SPACE FOR ROUGH WORK**

55. The difference between sum of three consecutive prime numbers before 50 and after 50 is completely divisible by which of the following?

(A) 2 (B) 3 (C) 4 (D) 7

(1) only by A and B

(2) only by C and D

(3) only by A and D

(4) By A, B and D

56. What is the degree of product of polynomials $x^3 - 2x^2 - 1$ and $x - x^2$ ?

(1) 4 (2) 5

(3) 3 (4) 6

57. $\dfrac{(\sqrt{x})^{\frac{2}{3}} \times (\sqrt{x})^{\frac{1}{3}} + \sqrt{x}}{(\sqrt{x})^{\frac{3}{4}} \times (\sqrt{x})^{\frac{1}{4}} + \sqrt{x}} = ?$

(1) $\sqrt{x}$ (2) 1

(3) $x$ (4) $x^{\frac{1}{3}}$

58. A vehicle covers a distance of 42 km in one hour. Then how much distance will it cover at the same speed in 20 minutes?

(1) 21 km (2) 840 m.

(3) 14 km (4) 20 km

59. Which of the following are the factors of polynomial $(2x - 5)^3 - 64$ ?

(1) $2(2x - 9)(2x^2 - 6x + 21)$ (2) $(2x - 5)(4x^2 - 12x + 21)$

(3) $(2x - 9)(4x^2 - 12x + 21)$ (4) $(2x + 9)(4x^2 + 12x + 21)$

**SPACE FOR ROUGH WORK**

**55.** 50 ರ ಹಿಂದಿನ ಹತ್ತಿರದ ಮೂರು ಮೂಲಸಂಖ್ಯೆಗಳ ಬೇರೀಜು ಮತ್ತು 50 ರ ಮುಂದಿನ ಹತ್ತಿರದ ಮೂರು ಮೂಲಸಂಖ್ಯೆಗಳ ಬೇರೀಜು ಇವುಗಳ ವ್ಯತ್ಯಾಸಕ್ಕೆ ಎಷ್ಟರಿಂದ ನಿಶೇಷವಾಗಿ ಭಾಗ ಹೋಗುತ್ತದೆ?

(ಅ) 2 (ಬ) 3 (ಕ) 4 (ಡ) 7

(1) ಕೇವಲ 'ಅ' ಮತ್ತು 'ಬ'
(2) ಕೇವಲ 'ಕ' ಮತ್ತು 'ಡ'
(3) ಕೇವಲ 'ಅ' ಮತ್ತು 'ಡ'
(4) ಕೇವಲ 'ಅ' 'ಬ' ಮತ್ತು 'ಡ'

**56.** $x^3 - 2x^2 - 1$ ಮತ್ತು $x - x^2$ ಈ ಬಹುಪದಿಗಳ ಗುಣಾಕಾರದಲ್ಲಿ ಬರುವ ದೊಡ್ಡ ಘಾತಾಂಕ ಎಷ್ಟು?

(1) 4 (2) 5
(3) 3 (4) 6

**57.** $\dfrac{(\sqrt{x})^{\frac{2}{3}} \times (\sqrt{x})^{\frac{1}{3}} + \sqrt{x}}{(\sqrt{x})^{\frac{3}{4}} \times (\sqrt{x})^{\frac{1}{4}} + \sqrt{x}}$ = ಎಷ್ಟು ?

(1) $\sqrt{x}$ (2) 1
(3) $x$ (4) $x^{\frac{1}{3}}$

**58.** ಒಂದು ವಾಹನವು ಒಂದು ಘಂಟೆಯಲ್ಲಿ 42 ಕಿ.ಮೀ. ಚಲಿಸುವದು. ಹಾಗಾದರೆ ಅದೇ ವೇಗದಿಂದ ಆ ವಾಹನವು 20 ಮಿನಿಟುಗಳಲ್ಲಿ ಎಷ್ಟು ಅಂತರ ಚಲಿಸುವದು?

(1) 21 ಕಿ.ಮೀ. (2) 840 ಮೀ.
(3) 14 ಕಿ.ಮೀ. (4) 20 ಕಿ.ಮೀ.

**59.** $(2x - 5)^3 - 64$ ಈ ಬಹುಪದಿಯ ಅವಯವಗಳನ್ನು ಕೆಳಗಿನವುಗಳಲ್ಲಿ ಆಯ್ಕೆ ಮಾಡಿರಿ.

(1) $2(2x - 9)(2x^2 - 6x + 21)$ (2) $(2x - 5)(4x^2 - 12x + 21)$
(3) $(2x - 9)(4x^2 - 12x + 21)$ (4) $(2x + 9)(4x^2 + 12x + 21)$

**SPACE FOR ROUGH WORK**

**60.** Santoshrao deposited Rs. 2,10,000 in bank for 5 years at simple interest. After the end of period, he received Rs. 3,36,000 from the bank. Then what was the rate of interest?

(1) 11% (2) 10%

(3) 12% (4) 14%

**61.** The ages of 60 children in a class are given in the frequency distribution table below. From this, find their mean age.

| Age (in years) | 12 | 13 | 14 | 15 |
|---|---|---|---|---|
| No. of children | 13 | 12 | 21 | 14 |

(1) 15 years (2) 13.6 years

(3) 13 years (4) 14.5 years

**62.** The curved surface area of a cone is 47.10 sq.cm. If radius of the base is 3 cm then what is its perpendicular height? ($\pi$ =3.14 cm)

(1) 3 cm (2) 4 cm

(3) 5 cm (4) 15.7 cm

**63.** How many coins of thickness 0.2 cm and diameter 4 cm will be formed by melting a solid metallic cuboid of length 22 cm, breadth 18 cm and height 6 cm?

(1) 935 (2) 954

(3) 594 (4) 945

**SPACE FOR ROUGH WORK**

**60.** ಸಂತೋಷರಾವನು ಒಂದು ಬ್ಯಾಂಕಿನಲ್ಲಿ 2,10,000 ರೂಪಾಯಿಗಳನ್ನು 5 ವರ್ಷ ಸರಳಬಡ್ಡಿಯ ಸಲುವಾಗಿ ಇಟ್ಟನು. ಅವಧಿಯ ನಂತರ ಅವನಿಗೆ 3,36,000 ರೂಪಾಯಿ ದೊರೆತವು ಹಾಗಾದರೆ ಸರಳಬಡ್ಡಿಯ ದರವೆಷ್ಟು?

(1) 11% (2) 10%

(3) 12% (4) 14%

**61.** ಒಂದು ವರ್ಗದಲ್ಲಿಯ 60 ವಿದ್ಯಾರ್ಥಿಗಳ ವಯಸ್ಸುಗಳ ನೊಂದಿ ಮಾಡಿ ಕೆಳಗಿನ ಆವೃತ್ತತೆ ಕೊಷ್ಟಕದಲ್ಲಿ ಕೊಡಲಾಗಿದೆ. ಅದರ ಮೇಲಿಂದ ಅವರ ವಯಸ್ಸಿನ ಮಧ್ಯಮಾನ ತೆಗೆಯಿರಿ.

| ವಯಸ್ಸು (ಪೂರ್ಣವರ್ಷ) | 12 | 13 | 14 | 15 |
|---|---|---|---|---|
| ವಿದ್ಯಾರ್ಥಿ ಸಂಖ್ಯೆ | 13 | 12 | 21 | 14 |

(1) 15 ವರ್ಷ (2) 13.6 ವರ್ಷ

(3) 13 ವರ್ಷ (4) 14.5 ವರ್ಷ

**62.** ಒಂದು ಶಂಕುವಿನ ವಕ್ರಪೃಷ್ಠಫಲ 47.10 ಚೌ.ಸೆಂ.ಮಿ ಇದೆ. ಅದರ ತಳದ ತ್ರಿಜ್ಯ 3 ಸೆಂ.ಮೀ ಇದೆ. ಹಾಗಾದರೆ ಅದರ ಲಂಬ ಎತ್ತರ ಎಷ್ಟು ? ($\pi$ =3.14 cm)

(1) 3 ಸೆಂ.ಮೀ. (2) 4 ಸೆಂ.ಮೀ.

(3) 5 ಸೆಂ.ಮೀ. (4) 15.7 ಸೆಂ.ಮೀ.

**63.** 22 ಸೆಂ.ಮೀ. ಉದ್ದ, 18 ಸೆಂ.ಮೀ. ಅಗಲ ಮತ್ತು 6 ಸೆಂ.ಮೀ. ಎತ್ತರ ವಿರುವ ಧಾತುವಿನ ಇಷ್ಟಿಕಾಚಿತಿಯನ್ನು ಕರಗಿಸಿ 0.2 ಸೆಂ.ಮೀ ದಪ್ಪ ಮತ್ತು 4 ಸೆಂ.ಮೀ ವ್ಯಾಸ ವಿರುವ ನಾಣ್ಯಗಳು ತಯಾರಿಸಿದರೆ ಒಟ್ಟು ಎಷ್ಟು ನಾಣ್ಯಗಳು ತಯಾರಾಗುವವು?

(1) 935 (2) 954

(3) 594 (4) 945

**SPACE FOR ROUGH WORK**

**64.** The area of a square is 4.41 sq.cm., then what is its perimeter?

(1) 4.2 cm (2) 10.4 cm

(3) 8.8 cm (4) 8.4 cm

**65.** The base radius of a cylindrical tank is 28 cm. It contains water. A metal cuboid of length 44 cm, breadth 14 cm and height 8 cm is dropped into it. Then what is the increase in the level of water in tank?

(1) 2 cm (2) 2.5 cm

(3) 3 cm (4) 1.5 cm

**66.** The length of side of a rhombus is 17 cm. If the length of one diagonal is 16 cm then what is the length of other diagonal?

(1) 30 cm (2) 17 cm

(3) 8 cm (4) 34 cm

**67.** The population of a town was 75000. This population is increased by 10% next year. After that year, the population decreased by 8%. In the third year the population is increased by 5% then at the end of third year, what will be the population?

(1) 935550 (2) 78000

(3) 79695 (4) 77950

**68.** Ashok sold the necklace worth Rs. 15,00,000 at 20% profit. How much amount Ashok will get?

(1) Rs. 1,12,000 (2) Rs. 18,00,000

(3) Rs. 17,00,000 (4) Rs. 16,00,000

**SPACE FOR ROUGH WORK**

**64.** ಒಂದು ಚೌರಸದ ಕ್ಷೇತ್ರಫಲ 4.41 ಚೌ.ಸೆಂ.ಮೀ. ಇದೆ. ಹಾಗಾದರೆ ಆ ಚೌರಸದ ಪರಿಮಿತಿ ಎಷ್ಟು?

(1) 4.2 ಸೆಂ.ಮೀ. (2) 10.4 ಸೆಂ.ಮೀ.

(3) 8.8 ಸೆಂ.ಮೀ. (4) 8.4 ಸೆಂ.ಮೀ.

**65.** ಒಂದು ಲಂಬವೃತ್ತಚಿತಿ ಆಕಾರದ ನೀರಿನ ಟಾಕಿಯ ತಳದ ತ್ರಿಜ್ಯ 28 ಸೆಂ.ಮೀ ಇದೆ. ಅದರಲ್ಲಿ ನೀರು ಇದೆ. ಆ ನೀರಿನಲ್ಲಿ 44 ಸೆಂ.ಮೀ ಉದ್ದ, 14 ಸೆಂ.ಮೀ ಅಗಲ ಮತ್ತು 8 ಸೆಂ.ಮೀ ಎತ್ತರ ವಿರುವ ಧಾತುವಿನ ತುಂಡು ಹಾಕಿದರೆ ನೀರಿನ ಪಾತಳಿಯ ಎತ್ತರದಲ್ಲಿ ಎಷ್ಟು ಹೆಚ್ಚಾಯಿತು?

(1) 2 ಸೆಂ.ಮೀ. (2) 2.5 ಸೆಂ.ಮೀ.

(3) 3 ಸೆಂ.ಮೀ. (4) 1.5 ಸೆಂ.ಮೀ.

**66.** 17 ಸೆಂ.ಮೀ. ಭುಜವಿರುವ ಸಮಭುಜ ಚೌಕೋನದ ಒಂದು ಕರ್ಣ 16 ಸೆಂ.ಮೀ ಇದ್ದರೆ ಅದರ ಇನ್ನೊಂದು ಕರ್ಣದ ಉದ್ದಳತೆ ಎಷ್ಟು?

(1) 30 ಸೆಂ.ಮೀ. (2) 17 ಸೆಂ.ಮೀ.

(3) 8 ಸೆಂ.ಮೀ. (4) 34 ಸೆಂ.ಮೀ.

**67.** ಒಂದು ನಗರದ ಜನಸಂಖ್ಯೆ 75,000 ಇದೆ. ಆ ಜನಸಂಖ್ಯೆ ಮುಂದಿನ ವರ್ಷ 10% ಹೆಚ್ಚಾಯಿತು. ಅದರ ಮುಂದಿನ ವರ್ಷ 8% ಕಡಿಮೆ ಆಯಿತು. ಮೂರನೆಯ ವರ್ಷ 5% ಹೆಚ್ಚಾಯಿತು. ಹಾಗಾದರೆ ಮೂರನೆಯ ವರ್ಷದ ಕೊನೆಗೆ ಆ ನಗರದ ಜನಸಂಖ್ಯೆ ಎಷ್ಟು?

(1) 935550 (2) 78000

(3) 79695 (4) 77950

**68.** ಅಶೋಕನು 15,00,000 ರೂಪಾಯಿಗಳಿಗೆ ಕೊಂಡ ಮನೆಯನ್ನು ಶೇಕಡಾ 20 ಲಾಭದಿಂದ ಮಾರಿದರೆ ಅವನಿಗೆ ದೊರೆಯುವ ಹಣವೆಷ್ಟು?

(1) 1,12,000 ರೂ. (2) 18,00,000 ರೂ.

(3) 17,00,000 ರೂ. (4) 16,00,000 ರೂ.

**SPACE FOR ROUGH WORK**

**69.** The measures of exterior angles of a triangle are 115º and 117º respectively, then which type of triangle is it?

(1) Acute angled triangle

(2) Obtuse angled triangle

(3) Right angled triangle

(4) Equilateral triangle

**70.** The length of a diagonal of a square is 11 cm then what is the length of its side?

(1) 11 cm

(2) $11\sqrt{2}$ cm

(3) $5.5\sqrt{2}$ cm

(4) $7\sqrt{2}$ cm

**71.** 3.9% of 1530 = ? (Choose two correct options.)

(1) 59.67

(2) $5967 \times 10^{-3}$

(3) $5967 \times 10^{-2}$

(4) 5.967

**72.** The measure of a minor arc is 160º then what is the measure of corresponding major arc?

(1) 160º

(2) 320º

(3) 200º

(4) 80º

**73.** A shopkeeper gives 12% discount on the printed price of a mobile. He sold a mobile for Rs. 26,400. What was its printed price?

(1) Rs. 30,000

(2) Rs. 32,000

(3) Rs. 26,412

(4) Rs. 3,000

**SPACE FOR ROUGH WORK**

**69.** ಒಂದು ತ್ರಿಕೋನದ ಎರಡು ಬಾಹ್ಯಕೋನಗಳ ಅಳತೆಗಳು ಅನುಕ್ರಮವಾಗಿ $115^{o}$ ಮತ್ತು $117^{o}$ ಇವೆ. ಹಾಗಾದರೆ ಆ ತ್ರಿಕೋನ ಯಾವ ಪ್ರಕಾರದ್ದಾಗಿರುತ್ತದೆ?

(1) ಲಘುಕೋನ ತ್ರಿಕೋನ
(2) ವಿಶಾಲಕೋನ ತ್ರಿಕೋನ
(3) ಕಾಟಕೋನ ತ್ರಿಕೋನ
(4) ಸಮಭುಜ ತ್ರಿಕೋನ

**70.** ಒಂದು ಚೌರಸಾಕೃತಿ ಕರ್ಣದ ಉದ್ದಳತೆ 11 ಸೆಂ.ಮೀ. ಇದ್ದರೆ ಅದರ ಭುಜದ ಉದ್ದಳತೆ ಎಷ್ಟು?

(1) 11 ಸೆಂ.ಮೀ. (2) $11\sqrt{2}$ ಸೆಂ.ಮೀ.
(3) $5.5\sqrt{2}$ ಸೆಂ.ಮೀ. (4) $7\sqrt{2}$ ಸೆಂ.ಮೀ.

**71.** 1530 ರ 3.9% = ಎಷ್ಟು ? (ಎರಡು ಯೋಗ್ಯ ಪರ್ಯಾಯಗಳ ಆಯ್ಕೆ ಮಾಡಿರಿ)

(1) 59.67 (2) $5967 \times 10^{-3}$
(3) $5967 \times 10^{-2}$ (4) 5.967

**72.** ಒಂದು ಲಘುಕಂಸದ ಅಳತೆ $160^{o}$ ಇದೆ. ಹಾಗಾದರೆ ಅದಕ್ಕೆ ಹೊಂದಿರುವ ವಿಶಾಲಕಂಸದ ಅಳತೆ ಎಷ್ಟು?

(1) $160^{o}$ (2) $320^{o}$
(3) $200^{o}$ (4) $80^{o}$


**73.** ಒಬ್ಬ ಅಂಗಡಿಕಾರನು ಮೋಬೈಲದ ಮುದ್ರಿತ ಬೆಲೆಯ ಮೇಲೆ 12% ರಿಯಾಯತಿ (ಸೂಟ) ಕೊಡುವನು. ಅವನು ಒಂದು ಮೋಬೈಲ 26,400 ರೂಪಾಯಿಗಳಿಗೆ ಮಾರಿದರೆ ಅದರ ಮುದ್ರಿತ ಬೆಲೆ ಎಷ್ಟು ?

(1) 30,000 ರೂ. (2) 32,000 ರೂ.
(3) 26,412 ರೂ. (4) 3,000 ರೂ.

**SPACE FOR ROUGH WORK**

**Instruction for Question No. 74 & 75**

In the following joint bar graph, the number of boys and girls in divisions A, B, C, D of $8^{th}$ standard are given. Observe the joint bar graph and answer the following questions.




**74.** What is the total number of students in all four divisions of $8^{th}$ standard?

(1) 255 (2) 300

(3) 200 (4) 355

**75.** What is the ratio of number of boys with number of girls in B division?


(1) 6:7 (2) 7:6

(3) 5:6 (4) 6:5

**SPACE FOR ROUGH WORK**

ಪ್ರಶ್ನೆ 74 ಮತ್ತು 75

8ನೆಯ ವರ್ಗದ A, B, C, D ವಿಭಾಗದ ಹುಡುಗ- ಹುಡುಗಿಯರ ಪಟಸಂಖ್ಯೆಯನ್ನು ಕೆಳಗಿನ ಜೋಡಿಸ್ತಂಭಾಲೇಖದಲ್ಲಿ ಕೊಡಲಾಗಿದೆ. ಅದರ ನಿರೀಕ್ಷಣೆ ಮಾಡಿ ಪ್ರಶ್ನೆಗಳ ಉತ್ತರದ ಯೋಗ್ಯ ಪರ್ಯಾಯ ಹುಡುಕಿರಿ.




**74.** 8ನೆಯ ವರ್ಗದ ಎಲ್ಲ ವಿಭಾಗಗಳ ಒಟ್ಟು ವಿದಾರ್ಥಿಗಳ ಸಂಖ್ಯೆ ಎಷ್ಟು?

(1) 255 (2) 300
(3) 200 (4) 355

**75.** 'B' ವಿಭಾಗದ ಹುಡುಗ- ಹುಡುಗಿಯರ ಪಟಸಂಖ್ಯೆಯ ಗುಣೋತ್ತರ ಎಷ್ಟು?

(1) 6:7 (2) 7:6
(3) 5:6 (4) 6:5

**SPACE FOR ROUGH WORK**

**SPACE FOR ROUGH WORK**